**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ನ್ಯಾಯಾಲಯ, ಮದ್ದೂರು**

**ಸಿ ಸಿ ನಂ. 3807/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ರಾಜೇಶ | ಚಾ ಸಾ -2 |
| ತಂದೆಯ ಹೆಸರು | - | ಪಂಚೇಗೌಡ | ಪ್ರಾ ಸಾ -2 |
| ವಯಸ್ಸು | - | 39 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ ಸ್ಥಳ | - | ಕಾರ್ಕಳ್ಳಿ | |

ದಿನಾಂಕಃ 29.08.2023 ರಂದು ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಅಭಿಯೋಜನೆಯ ಪರಃ ಎ ಪಿ ಪಿ ಯವರಿಂದ:**

ಚಾಸಾ-3 ಮತ್ತು ಆರೋಪಿ ನಮ್ಮ ಊರಿನವರು.

ಈಗ ನೊಡುತ್ತಿರುವ ಸಹಿ ನನ್ನದೆ. ನಿಪಿ-1 ರಲ್ಲಿ ಇರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ.1 ಬಿ ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ಸುಮಾರು 2-3 ವರ್ಷಗಳ ಹಿಂದೆ ಕೆ ಎಂ ದೊಡ್ಡಿ ಬಸ್ಸು ನಿಲ್ದಾಣದ ಬಳಿ ಪೋಲಿಸರ ಕೋರಿಕೆಯ ಮೇರೆಗೆ ಮಾಡಿರುತ್ತೆನೆ. ನಿಪಿ-1 ರಲ್ಲಿ ನಮೂದಾಗಿರುವ ವಿಚಾರ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಮಹಜರು ಮಾಡಿಲ್ಲ ಮತ್ತು ಏನನ್ನು ಅಮಾನತ್ತು ಪಡಿಸಿಕೊಂಡಿಲ್ಲ. ನಿಪಿ.1 ನ್ನು ಯಾವ ವಿಚಾರಕ್ಕೆ ಮಾಡಿರುತ್ತಾರೆ ಮತ್ತು ಅದರಲ್ಲಿ ಏನು ನಮೂದಾಗಿದೆ ಎಂದು ನನಗೆ ಗೊತ್ತಿಲ್ಲ. ಘಟನೆಗೆ ಸಂಬಂಧಪಟ್ಟಂತೆ ನಾನು ಪೋಲಿಸರಿಗೆ ಯಾವುದೆ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಮಾನ್ಯ ಎ ಪಿ ಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ಯವರಿಂದಃ**

ದಿ.02.04.2019 ರಂದು ಪೊಲೀಸರು ನಮ್ಮ ಗ್ರಾಮದ ಆರೋಪಿಯ ಅಂಗಡಿ ಮುಂಭಾಗ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ರಾತ್ರಿ 8.30 ರಿಂದ 9.45 ಗಂಟೆಯರವರೆಗೆ

ನಿಪಿ-1 ರಂತೆ ಮಹಜರು ಜರುಗಿಸಿ ಒಂದು ರಟ್ಟಿನ ಬಾಕ್ಸ್ ನಲ್ಲಿ ಇದ್ದ 90 ಎಂಎಲ್ ನ ಹೆ ವರ್ಡ್ಸ್ ಚಿಯರ್ಸ್ ವಿಸ್ಕಿಯ 33 ಪೌಚ್ ಗಳನ್ನು ಅಮಾನತ್ತು ಪಡಿಸಿಕೊಂಡು, ಅದರ ಪೈಕಿ ಒಂದು ಪೌಚ್ ಮದ್ಯವನ್ನು ರಸಾಯನಿಕ ಪರೀಕ್ಷೆಗೆ ಕಳುಹಿಸುವ ಸಲುವಾಗಿ ಪ್ಯಾಕ್ ಮಾಡಿ ಸಿಲ್ ಮಾಡಿದ್ದು, ಆಗ  ನಾನು ಸ್ಥಳದಲ್ಲಿ ಹಾಜರಿದ್ದು ನಿಪಿ-1 ಕ್ಕೆ ಸಹಿ ಮಾಡಿರುತ್ತೆನೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ದಿ.03.04.2019 ರಂದು ಪೋಲಿಸರಿಗೆ ಹೇಳಿಕೆ ನೀಡಿರುತ್ತೆನೆ ಎಂದರೆ ಸರಿಯಲ್ಲ. ಹೇಳಿಕೆಯ ಸದರಿ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು.

ನಿಪಿ-1 ಮತ್ತು 3 ರಲ್ಲಿ ನಮೂದಾಗಿರುವ ಎಲ್ಲಾ ವಿಚಾರಗಳು ಗೊತ್ತಿದ್ದರು ಆರೋಪಿ ನಮ್ಮ ಗ್ರಾಮದವರಾದ ಕಾರಣ ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಕೆ ವಿ ವಿ ವಕೀಲರಿಂದಃ**

ಏನು ಇರುವುದಿಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಸಾಕ್ಷಿ ಸಹಿಃ

ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಮದ್ದೂರು